















# ಫ್ಲೇರ್ಡ್ ಕುರ್ತ

ನಿವ್ರು ಕುರ್ತ ಹಾಕಲು ಇಷ್ಟ ಪಡುವವರಾಗಿದರೆ ಅಥವಾ ಕುರ್ತ ಇಷ್ಟಪಡುವಂತಃ ನಿಮ್ಮ ಸ್ನೇಹಿತರಿದ್ದರೆ ನಿಮಗೌಗಿ ಈ ವೀಡಿಯೋ

## ವಸ್ತುಗಳ ವಿವರ

೪೫ ಇಂಚು ಇರುವ ೫ ಮೀಟರ್ ಬಟ್ಟೆ
www.ushasew.com ಯಿಂದ ಡೌನ್ಲೂಡ್ ಮಾಡಿಕೊಂಡಿರುವ ಫ್ಲೇರ್ಡ್ ಕುರ್ತಾದ ಟೆಂಪ್ಲೇಟ್
ಚಾಲ್ಕ್
ಕತ್ತರಿ
ರೂಲ್ರ್
ಇಂಚ್ ರೆಡಿ ಬಯಾಸ್ ಟೇಪ್
ಬೀಡೆದ್ ಪಿನ್
೯ ಇಂಚಿನ ಕಂಸೀಲ್ಡ್ ಜ಼ಿಪ್

ಅತ್ಯಂತ ಸುಲಭವಾಗಿ ಫ್ಲೇರ್ಡ್ ಕುರ್ತ ಹೊಲೆಯಲು ನಾವು ಮಾಡಬೇಕಾದದ್ದು ಇಷ್ಟೇ, ನಾವು ಬಟ್ಟೆಯನ್ನು ಟೆಂಪ್ಲೇಟ್ ಅಲ್ಲಿ ಇರುವಂತೆ ಕತ್ತರಿಸಿ, ಟಾರ್ಸೊ ಪಿಸಸ್ ತಯಾರಿಸಿ. ತೋಳನ್ನು ಹೊಲೆದು, ಸ್ಕರ್ಟಿಗೆ ಹೊಲೆಯಬೇಕು ಮುಂಭಾಗದಲ್ಲಿ ಮಾತ್ರವಲ್ಲದೆ ಹಿಂಭಾಗದಲ್ಲೂ ಹೊಲೆಯಬೇಕು.ಎರಡೂ ಬದಿಯಲ್ಲೂ ಹೊಲೆದು ಜ಼ಿಪ್ ಅನ್ನು ಹೊಲೆದು ಹೆಮ್ ಲೈನ್ ಹೊಲೆದರೆ ಮುಗೀತು.


## ಹಂತ ೧ : ಟೆಂಪ್ಲೇಟಿನಂತೆ ಮಾರ್ಕ್ ಮಾಡಿ ಕತ್ತರಿಸುವುದು

ಬಟ್ಟೆಯನ್ನು ಮೇಜಿನ ಮೇಲೆ ಬಲಗಡೆ ಮೇಲೆ ಇಡಿ. ಬಟ್ಟೆಯನ್ನು ಮೇಲಿನಿಂದ ಕೆಳಗಿನವರೆಗೂ ವೀಡಿಯೋದಲ್ಲಿ ತೋರಿಸಿರುವಂತೆ ಒಳ್ಳೆಕ್ಕೆ ಮಡಚಿ. ಮಧ್ಯಭಾಗ ಸರಿಯಾಗಿ ಮಧ್ಯದಲ್ಲಿರುವಂತೆ ನೋಡಿಕೊಳ್ಳಿ, ಈಗ www.ushasew.com.ನಿಂದ ಡೌನ್ಲೋಡ್ ಮಾಡಿಕೊಂಡ ಟೆಂಪ್ಲೇಟ್ಟನ್ನು ಬಟ್ಟೆಯ ಮೇಲೆ ಇಡಿ.

ಮೊದಲಿಗೆ ನಾವು ಟೆಂಪ್ಲೇಟನ್ನು ಬಟ್ಟೆಯ ಕೆಳಭಾಗದಲ್ಲಿ ಇಡಿ. ಎಚ್ಚರಿಕೆಯಿಂದ ಟೆಂಪ್ಲೇಟಿನಲ್ಲಿರುವಂತೆ ಮಡಕೆಯನ್ನು ಗಮನಿಸಿ. ಬೀಡೆದ್ ಪಿನ್ ಇಂದ ಬಟ್ಟೆಯನ್ನು ಟೆಂಪ್ಲೇಟಿಗೆ ಪಿನ್ ಮಾಡಿ ನಂತರ ಟೆಂಪ್ಲೇಟಿನ ಹಿಂಭಾಗವನ್ನು ಬಟ್ಟೆಯ ಇನ್ನೊಂದು ಅರ್ಧಭಾಗದ ಮೇಲೆ ವೀಡಿಯೋದಲ್ಲಿ ತೋರಿಸುವಂತೆ ಇಟ್ಟು ಪಿನ್ ಮಾಡಿ.

ನಾವು  ಮುಂದಿನ ಟೆಂಪ್ಲೇಟಿಗೆ ಹೋಗುವ ಮೊದಲು ಪಿನ್ ಮಾಡಿರುವ ಬಟ್ಟೆಯ ಮೇಲೆ ಚಾಲ್ಕ್ ನಿಂದ ಮರ್ಕ್ ಮಾಡಿಕ್ಕೊಳೋಣ. ನೀವು ಟೆಂಪ್ಲೇಟಿನ ಮೇಲೆ ಒಂದು ಸಣ್ಣ ತ್ರಿಕೋಣಾಕಾರವನ್ನು ಗಮನಿಸಿರಬಹುದು, ಇದನ್ನೂ ಮಾರ್ಕ್ ಮಾಡಿಕ್ಕೊಳ್ಳಬೇಕು. ಹಾಗೆ 2 ನಾಚಸ್ ತ್ರಿಕೋಣಾಕಾರದ ಕೊನೆಯಲ್ಲಿರುವುದನ್ನೂ ಮಾರ್ಕ್ ಮಾಡಿಕ್ಕೋಳ್ಳಬೇಕು. ಬಟ್ಟೆಯ ಮೇಲ್ಭಾಗದಲ್ಲೂ ಮರ್ಕ್ ಮಾಡಿಕ್ಕೊಳ್ಳಬೇಕು.








ಟೆಂಪ್ಲೇಟಿನ ಹಿಂಭಾಗವನ್ನೂ ಇದೇ ವಿಧಾನವನ್ನು ಅನುಸರಿಸಿ.

ಈಗ ಪಿನ್ಗಳನ್ನು ತೆಗೆಯಿರಿ ಮತ್ತು ಮಾರ್ಕ್ ಮಾಡಿರುವುದರ ಮೇಲೆ ಕತ್ತರಿಸಿ. ಬಹಳ ಎಚ್ಚರಿಕೆಯಿಂದ ಕತ್ತರಿಸಿ.ಇದಾದ ನಂತರ ನಮ್ಮ ಬಟ್ಟೆಯ ಮುಂಭಾಗ ಮತ್ತು ಹಿಂಭಾಗ ಹೀಗೆ ಕಾಣುತ್ತದೆ. ನಾವೀಗ ಇದನ್ನು ಒಂದು ಪಕ್ಕಕ್ಕಿಟ್ಟು ಬೇರೆ ಭಾಗಗಳನ್ನು ಕತ್ತರಿಸೋಣ.

ಬಟ್ಟೆಯ ಮಡಕೆಯನ್ನು ತೆಗೆದು  ವೀಡಿಯೋದಲ್ಲಿ ತೋರಿಸಿರುವಂತೆ ಮಡಚಬೇಕು. ಮುಂಭಾಗ ಮುಂಭಾಗವನ್ನು ನೋಡುವಂತಿರಬೇಕು. ಸ್ಕರ್ಟ್ ನ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಇಡೋಣ ಸ್ಕರ್ಟ್ ನ ಬಟ್ಟೆ ಡಯಾಗ್ನಲ್ ಆಗಿರಬೇಕು ಏಕೆಂದರೆ ಬಟ್ಟೆಯ ಮೇಲೆ ಮಾರ್ಕ್ ಮಾಡಿರುವ ಭಾಗ ಮತ್ತು ಬಟ್ಟೆಯ ಮಡಿಕೆ ಹೊಂದಿಕೊಳ್ಳಬೇಕು.


ಇದೇ ರೀತಿ ಇನ್ನೊಂದು ಕಡೆಗೂ ಅನುಸರಿಸಬೇಕು. ಇನ್ನೊಂದು ಸ್ಕರ್ಟ್ ಪೀಸನ್ನು ಕತ್ತರಿಸಿ. ಈಗ ಇದು ಸ್ಕರ್ಟಿನ ಮುಂಭಾಗ ಮತ್ತು ಹಿಂಭಾಗವಾಗುತ್ತದೆ. ಈಗ ಉಳಿದಿರುವ ಬಟ್ಟೆಯನ್ನು ಇಲ್ಲಿ ತೋರಿಸಿರುವಂತೆ ಮಡಚಬೇಕು ಮುಂಭಾಗ ಮುಂಭಾಗವನ್ನು ನೋಡುವಂತಿರಬೇಕು.ಇದರ ಮೇಲೆ ತೋಳಿನ ಟೆಂಪ್ಲೇಟನ್ನು ಇಡೋಣ. ಬೀಡೆಡ್ ಪಿನ್ ನ ಸಹಾಯದಿಂದ ಬಟ್ಟೆಯನ್ನು ಭದ್ರಗೊಳಿಸಿ ಚಾಲ್ಕ್ ಇಂದ ಮಾರ್ಕ್ ಮಾಡೋಣ. ಇದಾದ ನಂತರ ನಾವು ಪಿನ್ ಗಳನ್ನು ತೆಗೆದು ಟೆಂಪ್ಲೇಟ್ ಅನ್ನು ತೆಗೆಯೋಣ. ಕತ್ತರಿಯ ಸಹಾಯದಿಂದ ಗೆರೆಯ ಮೇಲೆ ಕತ್ತರಿಸಿ. ಹುಷಾರಾಗಿ ಕತ್ತರಿಸಿ.ಏಕೆಂದರೆ ಇದು ಬಟ್ಟೆಯ ಅಂದವನ್ನು ಕೆಡಿಸಬಹುದು. ಈಗ ಕತ್ತರಿಸುವ ಎಲ್ಲಾ ಹಂತ ಮುಗಿಯಿತು.






## ಹಂತ 2 : ಮೇಲ್ಭಾಗದ ಟಾರ್ಸೊ ಪೀಸನ್ನು ಹೊಲೆಯುವುದು

ಮುಂದಿನ ಹಂತಕ್ಕಾಗಿ ನಾವು ಟಾಪಿನ ಮುಂಭಾಗ ಮತ್ತು ಹಿಂಭಾಗವನ್ನು ಹೊಲೆಯಲು ಮೇಜಿನ ಮೇಲೆ ಬಟ್ಟೆಯ ಹಿಂಭಾಗ ಮೇಲೆ ಬರುವಂತೆ ಇಡಬೇಕು. ಮೇಲ್ಭಾಗದ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಇಲ್ಲಿ ತೋರಿಸಿರುವಂತೆ ಇಡಿ. ನಿಮಗೆ ತ್ರಿಕೋಣಾಕಾರ ನೆನಪಿದೆಯೆ? ಅದೇ ಮಧ್ಯಭಾಗ.ಈಗ ಅದನ್ನು ಮಾರ್ಕ್ ಮಾಡೋಣ.ಬಟ್ಟೆಯ ಮುಂಭಾಗದ ಎರಡೂ ಅರ್ಧಭಾಗದಲ್ಲಿ ಮಾರ್ಕ್ ಮಾಡಿ.ಎರಡು ನಾಚಸ್ ಬಟ್ಟೆಯ ಕೊನೆಯಲ್ಲಿ ಮತ್ತು ಒಂದು ಬಟ್ಟೆಯ ಮೇಲ್ಭಾಗದಲ್ಲಿ.ರೂಲರ್ ಸಹಾಯದಿಂದ ಇದನ್ನು ಜೋಡಿಸಿ ತ್ರಿಕೋಣಾಕಾರ ಸೃಷ್ಟಿಸಿ. ಬಟ್ಟೆಯ ಹಿಂಭಾಗಕ್ಕೂ ಇದನ್ನೇ ಅನುಸರಿಸೋಣ.ಹಿಂಭಾಗದ ಟೆಂಪ್ಲೇಟ್ ಬಳಸಿ ಮಾರ್ಕ್ ಮಾಡಿ.ಎರಡೂ ಅರ್ಧದಲ್ಲಿ ತ್ರಿಕೋಣಾಕಾರ ಮಾರ್ಕ್ ಮಾಡಿ ಅದನ್ನು ರೂಲರ್ ಸಹಾಯದಿಂದ ಸೇರಿಸಿ.






ಇದು ಸಿದ್ಧವಾದ ಮೇಲೆ ಬಟ್ಟೆಯನ್ನು ಊಷಾ ವಂಡರ್ ಸ್ಟಿಚ್ ಪ್ಲಸ್ ಹೊಲಿಗೆ ಯಂತ್ರದ ಬಳಿ ತೆಗೆದುಕೊಂಡು ಬನ್ನಿ. ಬಟ್ಟೆಯ ಮುಂಭಾಗವನ್ನು ಮಾರ್ಕ್ ಮಾಡಿರುವಂತೆ ಮಡಚಿ ಎರಡೂ ತ್ರಿಕೋಣಾಕಾರ ಕೂಡುವಂತೆ ವೀಡಿಯೋದಲ್ಲಿ ತೋರಿಸಿರುವಂತೆ ಮಾಡಿ. ಪ್ರೆಸ್ಸರ್ ಫುಟ್ಟನ್ನು ತ್ರಿಕೋಣಾಕಾರದ ಮೇಲ್ಭಾಗ ಹೊನ್ದುವಂತೆ ಜೋಡಿಸಿ. ಪ್ಯಾಟರ್ನ್ ಸೆಲೆಕ್ಟರ್ ಡ್ಯಲನ್ನು A ನಲ್ಲಿಡಿ ಮತ್ತು ಹೊಲಿಗೆಯ ಉದ್ದ 3ಕ್ಕೆ ಇಟ್ಟು ಗೆರೆಯ ಮೇಲೆ ಹೊಲೆಯಿರಿ. ಮೊದಲು ಮತ್ತು ಕೊನೆಯಲ್ಲಿ ರಿವರ್ಸ್ ಹೊಲಿಗೆ ಹಾಕಿ ಹೊಲಿಗೆಯನ್ನು ಭದ್ರಗೊಳಿಸಲು ಮರೆಯಬೇಡಿ. ಇದೇ ಕ್ರಮವನ್ನು ಇನ್ನೊಂದು ತ್ರಿಕೋಣಾಕಾರಕ್ಕೂ ಮಾಡಿ ಹೆಚ್ಚಾಗಿರುವ ದಾರವನ್ನು ಕತ್ತರಿಸಿ. ನಿಮ್ಮ ಡಾರ್ಟ್ ತಯಾರಾಗಿದೆ.










ಈಗ ನಾವು ಬಟ್ಟೆಯ ಹಿಂಭಾಗದಲ್ಲಿ ಡಾರ್ಟ್ ಮಾಡಬೇಕು. ಬಟ್ಟೆಯ ಮೇಲೆ ತ್ರಿಕೋಣಾಕಾರವನ್ನು ಮಡಾಚಿ ಹೊಲೆಯಿರಿ. ಇನ್ನೊಂದು ಅರ್ಧಭಾಗಕ್ಕೂ ಹೀಗೆ ಮಾಡಿ. ಹೆಚ್ಚುವರಿಯಾದ ದಾರವನ್ನು ಕತ್ತರಿಸಿ. ನಿಮ್ಮ ಡಾರ್ಟ್ಗಳು ಮುಂಭಾಗ ಮತ್ತು ಹಿಂಭಾಗ  ನೋಡಲು ಹೀಗೆ ಕಾಣುತ್ತದೆ.


ನಾವೀಗ ಎರಡೂ ಬಟ್ಟೆಯನ್ನು ಸೇರಿಸಿ ಹೊಲೆಯೋಣ. ನೆನಪಿರಲಿ ಇದು ಮುಂಭಾಗ ಮತ್ತು ಇದು ಹಿಂಭಾಗ. ಎರಡೂ ಬಟ್ಟೆಯನ್ನು ಒಂದರ ಮೇಲೊಂದು ಮೇಲ್ಭಾಗ ಕಾಣುವಂತೆ ಇರಿಸಿ,ಇದಕ್ಕೆ ಪಿನ್ ಹಾಕಿ ಭದ್ರಗೊಳಿಸಿ.ಊಷಾ ಮಿಷೀನಿನ ಬಳಿ ತೆಗೆದುಕೊಂಡು ಹೋಗಿ ತೋಳುಗಳನ್ನು ಹೊಲೆಯಲು ಪ್ರಾರಂಭಿಸೋಣ.

ಪ್ರೆಸ್ಸರ್ ಫುಟ್ ನ ಸಹಾಯದಿಂದ ಬಟ್ಟೆಯನ್ನು ಹೊಂದಿಸಿ ಹೊಲೆಯಿರಿ, ಸ್ವಲ್ಪ ಹೊಲಿಗೆಯ ನಂತರ ರಿವರ್ಸ್ ಹೊಲಿಗೆ ಹಾಕಿ ತೋಳಿನ ಅಂತ್ಯದವರೆಗೂ ಹೊಲೆಯಿರಿ. ಹೊಲೆದ ನಂತರ ಹೆಚ್ಚಾಗಿರುವ ದಾರವನ್ನು ಕತ್ತರಿಸಿ, ನಿಮ್ಮ ಹೊಲಿಗೆ ಹೀಗೆ ಕಾಣಬೇಕು.














## ಹಂತ 3 : ಕತ್ತಿನ ಭಾಗ

ಕತ್ತಿನ ಭಾಗವನ್ನು ಹೊಲೆಯಲು ಅದಕ್ಕೆ ಎಲಿವೇಟೆಡ್ ನೋಟ ಕೊಡಲು ನಾವು ಬ್ಲು ಬಯಾಸನ್ನು ಸೇರಿಸುತ್ತೇವೆ. ಇದಕ್ಕೆ ತಯಾರಿರುವ ಬಯಾಸ್ ಸ್ಟ್ರಿಪ್ ಅನ್ನು ತೆಗೆದುಕೊಳ್ಳಬೇಕು. ಅದನ್ನು ಕತ್ತಿನ ಅಳತೆಗೆ ತಕ್ಕಂತೆ ತೆಗೆದುಕೊಂಡು ಕತ್ತರಿಸಿ.ಒಂದೌ ಇಂಚು ಹೆಚ್ಚಾಗಿ ತೆಗೆದುಕೊಳ್ಳಿ.ನಿಮ್ಮ ಬಟ್ಟೆಯನ್ನು ತಿರುಗಿಸಿ ಮೇಲ್ಭಾಗ ನಿಮ್ಮನ್ನು ನೋಡುವಂತಿರಬೇಕು.ಈಗ ರಿಬ್ಬನಿನ ಮಡಕೆಯನ್ನು ತೆಗೆಯಿರಿ ಮತ್ತು ಕತ್ತಿನ ಬಲಭಾಗದಿಂದ ಹೊಲೆಯಲು ಪ್ರಾರಂಭಿಸಿ ಹೊಲೆಯುತ್ತಾ ಹೋಗಿ.ಇದಾದ ನಂತರ ರಿವರ್ಸ್ ಸ್ಟಿಚ್ ಸೆಲೆಕ್ಟರನ್ನು ಬಳಸಿ ಹೊಲಿಗೆಯನ್ನು ಭದ್ರಗೊಳಿಸಿ.ಹೆಚ್ಚಾಗಿರುವ ಸ್ಟ್ರಿಪನ್ನು ಕತ್ತರಿಸಿ. ಈಗ ಬಯಾಸ್ ಸ್ಟ್ರಿಪನ್ನು ಮಡಚಿ ಮೇಲಿನಂತೆ ಹೊಲೆಯಿರಿ.ಮುಂದೆ ಅದನ್ನು ಹಿಂಭಾಗಕ್ಕೆ ಮಡಚಿರುವುದರ ಮೇಲೆ ಹೊಲೆಯಬೇಕು. ಇದು ಸ್ವಲ್ಪ ಕಷ್ಟವೆನಿಸ ಬಹುದು ಆದರೆ ಇದು ತುಂಬಾ ಅದ್ಭುತವಾದ ಫಲಿತಾಂಶವನ್ನು ಕೊಡುತ್ತದೆ. ಈಗ ನಿಮ್ಮ ಕತ್ತಿನ ಭಾಗ ನೋಡಲು ಹೀಗೆ ಕಾಣುತ್ತದೆ.










## ಹಂತ 4 : ತೋಳ್ಳನ್ನು ಸೇರಿಸುವುದು

ಟಾಪಿಗೆ ತೋಳನ್ನು ಸೇರಿಸುವುದು. ತೋಳಿನ ಭಾಗವನ್ನು ಅರ್ಧಕ್ಕೆ ಮಡಚಿ ನಾಚಸನ್ನು ಮಧ್ಯಭಾಗದಲ್ಲಿ ಮಾರ್ಕ್ ಮಾಡಿ.ಇದು ಮುಂಭಾಗವನ್ನು ಮುಂಭಾಗಕ್ಕ ಮತ್ತು ಹಿಂಭಾಗವನ್ನು ಹಿಂಭಾಗಕ್ಕೆ ಹೊಲೆಯಬೇಕು.ವೀಡಿಯೋದಲ್ಲಿ ತೋರಿಸಿರುವಂತೆ ತೋಳನ್ನು ಭುಜದ ಭಾಗಕ್ಕೆ ಪಿನ್ನಿನಿಂದ ಬ್ಭಗೊಳಿಸಬೇಕು. ಪೂರ್ತಿ ತೋಳಿಗೆ ಪಿನ್ ಹಾಕಿ. ನೆನೆಪಿರಲಿ ನಾವು ಬಟ್ಟೆಯ ಹಿಂಭಾಗದಲ್ಲಿ ಇದನ್ನು ಮಾಡುತ್ತಿದ್ದೀವಿ. ಇನ್ನೊಂದು ತೋಳಿಗೂ ಇದೇ ರೀತಿ ಮಾಡಬೇಕು. ನಂತರ ಎಲ್ಲವನ್ನೂ ಸೇರಿಸಿ ಹೊಲೆಯಬೇಕು.

ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೊನೆಯಲ್ಲಿಟ್ಟು ಹೊಲೆಯಲು ಫ್ರಾರಂಭಿಸಿ ಹಾಗೆ ಪಿನ್ಗಳನ್ನು ತೆಗೆಯುತ್ತಾ ಹೋಗಿ. ಹೆಚ್ಚುವರಿಯಾದ ದಾರವನ್ನು ಕತ್ತರಿಸಿ ಇನ್ನೊಂದು ತೋಳಿಗೂ ಹೀಗೆ ಮಾಡಿ.
ಚೆನ್ನಾಗಿದೆ ಅಲ್ವಾ ಈಗ ನಮ್ಮ ಅರ್ಧ ಕೆಲಸ ಮುಗಿದಂತೆ.









## ಹಂತ 5 : ಸ್ಕರ್ಟನ್ನು ಜೋಡಿಸುವುದು

ಈಗ ನಾವು ಸ್ಕರ್ಟನ್ನು ಸೇರಿಸೋಣ,ಕುರ್ತದ ಮೇಲ್ಭಾಗವನ್ನು ತೆಗೆದುಕೊಂಡು ಅದನ್ನು ತಿರುಗಿಸಿ. ಮೇಲ್ಭಗ ಕೆಳಗಿರಬೇಕು ಮತ್ತು ಕೆಳಭಾಗ ನಿಮ್ಮನ್ನು ನೋಡುವಂತಿರಬೇಕು. ಸ್ಕರ್ಟಿನ ಮೇಲ್ಭಾಗವನ್ನು ಬಟ್ಟೆಯ ಕೆಳಭಾಗಕ್ಕೆ ಸೇರಿಸಿ. ಟಾಪಿನ ಮುಂಭಾಗವನ್ನು ಸ್ಕರ್ಟಿನ ಮುಂಭಾಗಕ್ಕೆ ವೀಡಿಯೋದಲ್ಲಿ ತೋರಿಸಿರುವಂತೆ ಹೊಂದಿಸಿ, ಹಾಗೆ ಸ್ಕರ್ಟಿನ ಹಿಂಭಾಗವನ್ನು ಟಾಪಿನ ಹಿಂಭಾಗಕ್ಕೆ ಪಿನ್ ಮಾಡಿ.

ಇದನ್ನು ಹೊಲೆಯೋಣ, ಪ್ರೆಸ್ಸರ್ ಫುಟನ್ನು ಬಟ್ಟೆಯ ಕೊನೆಗೆ ಹೊಂದಿಸಿ ಹೊಲೆಯಲು ಫ್ರಾರಂಭಿಸಿ ಹಾಗೆ ಹೊಲೆಯುವಾಗ ಎಲ್ಲಾ ಪಿನ್ಗಳನ್ನು ತೆಗೆಯಿರಿ. ಇನ್ನೊದು ಬದಿಯೂ ಹೀಗೆ ಹೊಲೆಯಬೇಕು.ಹೆಚ್ಚುವರಿಯಾದ ದಾರವನ್ನು ಕತ್ತರಿಸಿ.
















## ಹಂತ 6 : ಜಿಪನ್ನು ಹೊಲೆಯುವುದು ಮತ್ತು ಸೈಡ್ ಸೀಮನ್ನು ಹೊಲೆಯುವುದು

ನಾವು ಈಗ ಸೈಡ್ ಸಿಮನ್ನು ಕಂಕುಳಿನಿಂದ ಕೊನೆಯವರೆಗೂ ಹೊಲೆಯುತ್ತಾ ಹೋಗಬೇಕು. ಪಿನ್ ಹಾಕಿ ಬಟ್ಟೆಯನ್ನು ಭದ್ರಪೊಳಿಸಿ. ತೋಳು ಟಾಪನ್ನು ಸೇರುವ ಜಾಗದಲ್ಲಿ ಸ್ಕರ್ಟಿನಿಂದ 2 ಇಂಚು ಅಳತೆ ಮಾಡಿ ಮಾರ್ಕ್ ಮಾಡಿ. ಇದೇ ಜಾಗದಲ್ಲಿ ನಾವು ಜಿಪನ್ನು ಹೊಲೆಯಬೇಕು. ಬಟ್ಟೆಯನ್ನು ಇಲ್ಲಿ ಮಾರ್ಕ್ ಮಾಡಿ. ಜಿಪಿನ ಕೊನೆಯ 1.5 ಇಂಚು ಮೇಲೆ ಮಾರ್ಕ್ ಮಾಡಿ.ಬಟ್ಟೆಗೆ ಜಿಪನ್ನು ಪಿನ್ ಮಾಡಿ, ಜಿಪಿನ ಮುಂಭಾಗ ಬಟ್ಟೆಯ ಬಲಭಾಗವನ್ನು ನೋಡುವಂತಿರಬೇಕು ಮತ್ತು ಜಿಪಿನ ಹಿಂಭಾಗ ನಿಮ್ಮನ್ನು ನೋಡುವಂತಿರಬೇಕು. ಪಿನ್ನಿನಿಂದ ಭದ್ರಗೊಳಿಸಿ. ಇದಾದ ನಂತರ ಬಟ್ಟೆಗೆ ಪಿನ್ ಅನ್ನು ಹಾಕಿ ಭದ್ರಗೊಳಿಸಿ.ಈಗ ಇನ್ನೊಂದು ಕಡೆಯೂ ಹೀಗೆ ಹೊಲೆಯಿರಿ ಆದರೆ ಜಿಪನ್ನು ಹಾಕುವ ಹಂತವನ್ನು ಬಿಟ್ಟು ಇನ್ನೆಲ್ಲಾ ಅದೇ ಕ್ರಮವನ್ನು ಪಾಲಿಸಿ. ತೋಳನ್ನು ಕುರ್ತದ ಕೊನೆವರೆಗೂ ಪಿನ್ ಮಾಡಿ. ಈಗ ಎಲ್ಲವನ್ನೂ ಸೇರಿಸಿ ಹೊಲೆಯುವ ಸಮಯ.

ಪ್ರೆಸ್ಸರ್ ಫುಟ್ಟಿಗೆ ತೋಳಿನ ಕೊನೆಯನ್ನು ಇಟ್ಟು ಹೊಲೆಯಲು ಪ್ರಾರಂಭಿಸಿ ಹೊಲೆಯುತ್ತಾ ಪಿನ್ನಳನ್ನು ತೆಗೆಯಲು ಮರೆಯಬೇಡಿ. ಕಂಕುಳಿನ ಕೆಳಗೆ ಪಿವಟ್ ಟೆಕ್ನಿಕನ್ನು ಪಾಲಿಸಿ ಇದು ಸೂಸಿಯನ್ನು ತೆಗೆಯದೆ ಬಟ್ಟೆಯನ್ನು ತಿರುಗಿಸುವುದು. ಇದು ಹೊಲಿಗೆ ಬರದಂತೆ ಕಾಪಾಡುತ್ತದೆ. ಸೀಮನ್ನು ರಿವರ್ಸ್ ಹೊಲಿಗೆಯೊಂದಿಗೆ ಭದ್ರಗೋಳಿಸಿ. ಇನ್ನೊಂದು ಕಡೆಗೆ ಬಟ್ಟೆಯ ಕೊನೆಯಿಂದ ಪ್ರಾರಂಭಿಸಿ ಜಿಪ್ಪಿನ ವರೆಗೂ ಹೊಲೆಯುತ್ತಾ ಬನ್ನಿ. ಈಗ ಜಿಪ್ಪನ್ನು ಹೊಲೆಯುವುದೆ ಬೇಡ. ಜಿಪಿನ ಕೊನೆಯಿಂದ ಮೇಲ್ಭಾಗದಲ್ಲಿ ಹೊಲೆಯುತ್ತಾ ಬನ್ನಿ.


ಇದಾದ ನಂತರ ರೆಗ್ಯುಲರ್ ಫುಟ್ಟನ್ನು ತೆಗೆದು ಜಿಪ್ಪರ್ ಫುಟ್ಟನ್ನು ಹಾಕಿ. ಇಲ್ಲಿ ತೋರಿಸಿರುವಂತೆ ಜಿಪನ್ನು ಹೊಲೆಯಿರಿ, ನೆನೆಪಿರಲಿ ಇದು ಸ್ವಲ್ಪ ಕಷ್ಟವಾಗಬಹುದು ಜಾಗ್ರತೆವಹಿಸಿ ಹೊಲೆಯಿರಿ. ಜಿಪ್ಪಿನ ಒಂದು ಬದಿಯಿಂದ ಹೊಲೆಯಲು ಪ್ರಾರಂಭಿಸಿ ಇನ್ನೊಂದು ಕಡೆನೂ ಹೀಗೆ ಹೊಲೆಯೋಣ. ಇಷ್ಟೇ ಅಲ್ಲಾ ಇನ್ನೂ ನಾವು ಜಿಪ್ಪರ್ ಎಡ್ಜನ್ನ ಮತ್ತು ಜಿಪ್ಪರ್ ಟೀಥನ್ನ ಮಧ್ಯದಲ್ಲಿ ಹೊಲೆಯಬೇಕು.ಹಿಂಭಾಗದಲ್ಲಿ ಹೊಲೆಯಿರಿ ಆದಷ್ಟು ಹಲ್ಲಿನ ಹತ್ತಿರ ಹೊಲೆಯಿರಿ. ಇದಾದ ನಂತರ ಜಿಪನ್ನು ಅಡ್ಡವಾದ ಮಾರ್ಕಿಂಗ್ ಮೇಲೆ ಹೊಲೆಯಿರಿ.

## ಹಂತ 7 : ತೋಳು ಮತ್ತು ಕೊನೆಯನ್ನು ಹೆಮ್ ಮಾಡುವುದು











ಜಿಪ್ಪರ್ ಫುಟ್ಟನ್ನು ತೆಗೆದು A ಫುಟ್ಟನ್ನು ಜೋಡಿಸಿ ಡ್ರೆಸನ್ನು ಹೆಮ್ಮಿನ್ ಹೊಲೆದು ಮುಗಿಸಿ

ಮೊದಲು ತೋಳನ್ನು ಹೆಮ್ ಮಾಡಿ,ತೋಳನ್ನು ವೀಡಿಯೋದಲ್ಲಿ ತೋರಿಸಿರುವಂತೆ ½ ಇಂಚು ಎರಡು ಬಾರಿ ಮಡಚಿ. ಸರ್ಕ್ಯುಲರ್ ಹೆಮನ್ನು ಹೊಲೆಯಲು ಅಸೆಸರಿ ಬಾಕನ್ನು ತೆಗೆಯಿರಿ. ತೋಳಿನ ಸುತ್ತಲೂ ಹೊಲೆಯಿರಿ. ಇನ್ನೊಂದು ಕಡೆಗೂ ಹೀಗೆ ಹೊಲೆಯೋಣ. ಎರಡು ಬಾರಿ ಮಡಚಿ ಹೊಲೆಯಿರಿ.

ಈಗ ಕೊನೆಯ ಹಂತ : ತಳಭಾಗವನ್ನು ತೋಳಿನಂತೆ ಹೆಮ್ ಮಾಡೋಣ, ಬಟ್ಟೆಯನ್ನು ½ ಇಂಚು ಎರಡು ಬಾರಿ ಒಳಕ್ಕೆ ಮಡಚಿ ಹೊಲೆಯಿರಿ. ಪೂರ್ತಿ ಕುರ್ತಾಗೆ ಹೀಗೆ ಹೊಲೆಯಬೇಕು.

ಈಗ ಬಟ್ಟೆಯನ್ನು ಒಳಗಿಂದ ಹೋರಕ್ಕೆ ತಿರುಗಿಸಿ ನಿಮ್ಮ ಫ್ಲೇರ್ಡ್ ಕುರ್ತ ತಯಾರಾಗಿದೆ! ನಿಮಗೆ ಇದು ಅತ್ಯಂತ ಪ್ರಿಯವಾಗುತ್ತದೆ. ಇದಕ್ಕೆ ಹೊಂದುವಂತಃ ಬ್ರೋಚ್ ನೊಂದಿಗೆ ಹಾಕಿಕೊಳ್ಳಬಹುದು.ನೀವೀಗ ನಿಮ್ಮಿಷ್ಟದಂತೆ ನಿಮ್ಮ ಅಭಿರುಚಿಗೆ ತಕ್ಕಂತೆ ಬಟ್ಟೆಯನ್ನು ಹೊಲೆದುಕೊಳ್ಳಬಹುದು. ನಿಮಗೆ ಹೇಗೆನ್ನಿಸುತ್ತದೆ? ನಮಗೆ ಕಮೆಂಟ್ನಲ್ಲಿ ತಿಳಿಸಿ.
ಮರೀದೆ ಲೈಕ್ ಮಾಡಿ, ಶೇರ್ ಮಾಡಿ ಹಾಗೂ ಸಬ್ಸ್ಕ್ರೈಬ್ ಮಾಡಿ.